

# ನೀರು ಸೋಕಿದರೆ ಎಲ್ಲ ಕಲ್ಲು!

ಕಲ್ಲಾಗಿದ್ದ ಅಹಲ್ಯೆ ರಾಮನ ಪಾದಸ್ಪರ್ಶದಿಂದ ಮಾವನರೂಪ ಪಡೆದಳು ಎನ್ನುವುದು ರಾಮಾಯಣದ ಕಥೆಯಾಯಿತು. ಆದರೆ ಇಂಗ್ಲೆಂಡ್ ಕೆನರ್ಸ್‌ಬರ್ಗ್‌ನಲ್ಲೊಂದು ಒಂದು ಬಾವಿಯಿದೆ. ಇದರ ಹೆಸರು ಪೆಟ್ರಿಫೈಯಿಂಗ್ ವೆಲ್. ಈ ಬಾವಿಯ ನೀರು ಯಾವ ವಸ್ತುಗಳ ಮೇಲೆ ತಾಕಿದರೂ ಅದು ಕಲ್ಲಾಗಿ ಮಾರ್ಪಾಟು ಆಗುತ್ತದೆಯಂತೆ!

ಹಾಗೆಂದು ಜನರೇನು ಸುಳ್ಳು ಸುಳ್ಳೇ ಈ ಸುದ್ದಿ ಹರಡಿಸಿಲ್ಲ. ಬಹಳಷ್ಟು ಮಂದಿ ಪರೀಕ್ಷೆ ಕೂಡ ಮಾಡಿದ್ದಾರೆ. ದೂರದಿಂದ ಏನೇನೋ ವಸ್ತುಗಳನ್ನು ಬಾವಿಯ ಒಳಗೆ ಎಸೆದಿದ್ದಾರೆ. ಆದರೆ ಕೊನೆಗೆ ದಂಗಾಗಿದ್ದಾರೆ. ಏಕೆಂದರೆ ಅವರು ಎಸೆದ ಎಲ್ಲಾ ವಸ್ತುಗಳೂ ಕಲ್ಲಾಗಿ ಮಾರ್ಪಾಟು ಹೊಂದಿವೆಯಂತೆ.

ಹೀಗೆಂದ ಮೇಲೆ ಅಲ್ಲಿ ಭೂತವೇ ಇರಬೇಕು ಎನ್ನುವುದು ಜನರ ನಂಬಿಕೆ. ಪರೀಕ್ಷೆ ಮಾಡಿ ಸೋತವರೆಲ್ಲಾ ಅಲ್ಲಿ ಭೂತ ಇದೆ ಎಂದೇ ಸುದ್ದಿ ಮಾಡಿದ್ದಾರೆ. ಸಾಲದು ಎಂಬುದಕ್ಕೆ ಈ ಬಾವಿ ಒಂದು ಕಡೆಯಿಂದ ನೋಡಲು ಥೇಟ್ ಬುರುಡೆಯಂತೆ ಕಾಣುತ್ತದೆ. ಇಷ್ಟು ಸಾಕಲ್ಲವೇ ಜನರು ನಂಬಲು! ಇದು ಭೂತದ ಬಾವಿ ಎಂದು ಜನರು ಗೊಂಬೆಗಳನ್ನು ಕಟ್ಟಿಟ್ಟಿದ್ದಾರೆ.

ಆದರೆ ವಿಜ್ಞಾನಿಗಳು ಇದನ್ನೆಲ್ಲಾ ನಂಬುತ್ತಾರೆಯೇ? `ನೀರಿನಲ್ಲಿ ಹೆಚ್ಚಿನ ಪ್ರಮಾಣದ ಮಿನರಲ್ ಇದ್ದು, ಇವು ವಸ್ತುಗಳ ಸುತ್ತಲೂ ಶೇಖರಣೆಗೊಂಡು ಕಲ್ಲಾಗಿ ಕಾಣುವಂತೆ ಮಾಡುತ್ತದೆ' ಎನ್ನುವುದು ಅವರ ಹೇಳಿಕೆ.



■ ಎಚ್.ಎಸ್. ಮನು